ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿರುವ ಮೂರು ನಾಲ್ಕು ಜನರ ಹೆಸರಿಗೆ ಯಾರು ಪ್ರೀಮಿಯಸ್‌ಗೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎನ್ನುವ ವಿಚಾರದಲ್ಲಿ ಕಾನೂನು ವಿಭಾಗದಲ್ಲಿ ವಿಚಾರ ಮಾಡಿ ಸರ್ಕಾರದ ಮಟ್ಟದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

(*ii*) *re*: **Nonpayment of Compensation to the families of the deceased in the accident at Narian Iron and Maganesa works**

ಶ್ರೀ ಸಿ. ಬೈರೇಗೌಡ (ಬೆಮಗಲ್). —ಚಿತ್ರದುರ್ಗ ಜಿಲ್ಲೆಯ ನಾರಾಯಣ್ ಕಬ್ಬಿಣ ಹಾಗೂ ಮ್ಯಾಂಗನೀಸ್ ಗಣಿಯಲ್ಲಿ ನಡೆದ ಅಪಘಾತ ಮತ್ತು ಕಾಂಪನ್ಸೇಷನ್ ಕೊಡದೆ ಇರುವ ವಿಚಾರದಲ್ಲಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

Shri H. M. CHANNABASAPPA.—

Madam in reply to the above calling attention notice, I beg to state as :—

On 4th February 1974 about 2.00 p.m. the deceased viz., Pujari Obalappa while going to his village Megalahally about 15 miles South West of Bharmasagar Police Station after attending to his work in Narain Mines fell into a pit of about 6 feet deep, accidentally. The pit is by the side of a motorable road leading to the Narain Mines.

To the East—There is a motorable road ;

To the West—There is a Katcha road ;

To the South—There is a land of Jagir Basappa.

To the North—Land of Ex. Chairman Thumballappa ;

After falling into the pit, he sustained injuries on his face and there were blood-stains in the pit. The wife of the deceased viz., Hanumakka, with the help of others, managed to get the injured removed to her house, but the injured died while undergoing treatment in his house at Megalahally. On 5th February 1974 at 8-30 p.m. Smt. Hanumakka reported the matter to the Police. The case at Bharmasagar Police Station Crime No. 11-74 under section 174 Cr.P.C. is registered. It is still under investigation. After examining the blood-relatives and other witnessess, it was clear that the death was due to accidental fall and no foul-play is suspected. Body was subjected to post-mortem and the opinion of the Medical Officer, Bharmasagar is to the effect that death is due to fall from height.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಹೇಳಿಕೆಯಲ್ಲಿ ಆರು ಅಡಿ ಆಳದ ಹಳ್ಳಕ್ಕೆ ಬಿದ್ದು ಸತ್ತ ಎಂದು ಹೇಳಿದ್ದಾರೆ. ಆರು ಅಡಿ ಹಳ್ಳಕ್ಕೆ ಬಿದ್ದರೆ ಯಾರಾದರೂ ಸಾಯುತ್ತಾರೆಯೇ ಎನ್ನುವುದು ನನ್ನ ಅನುಮಾನ. ಅಲ್ಲಿ ವಾಸ ಮಾಡಿರುವುದೇನೆಂದರೆ, ಕಬ್ಬಿಣದ ಅದಿರು ತೆಗೆಯುತಕ್ಕ ಗಣಿ ಡೈಲಾಪ್ ಮೈಡೇಷಿಡ್ ಕಂಡೀಷನ್‌ನಲ್ಲಿದ್ದು ಗಣಿಯಲ್ಲಿ ಕೆಲಸ ಮಾಡುವವರ ಸೇಫ್ಟಿದೃಷ್ಟಿಯಿಂದ ಅಲ್ಲಿ ಕೆಲಸ ಮಾಡಿಸಬಾರದೆಂದು ತಿಳಿಸಿದ್ದಾರೆ. ಅಂಥಹದೆ ಕೆಲಸಗಾರರನ್ನು ಹಾಕಿ ಕೆಲಸ ಮಾಡಿಸುತ್ತಿದ್ದಾಗ ಗೋಡೆ ಕುಸಿದು ಬಿದ್ದು ಕಾರ್ಮಿಕ ಮೃತನಾಗಿದ್ದಾನೆ. ಗಣಿಯಲ್ಲಿ ಸತ್ತ

(ಶ್ರೀ ಸಿ. ಬೈರೇಗೌಡ)

ದ್ದಾನೆಂದು ರಿಕಾರ್ಡ್ ಮಾಡಿದರೆ ಅವನಿಗೆ ಪರಿಹಾರವನ್ನು ಕೊಡಬೇಕಾಗುವುದಲ್ಲದೆ ಪ್ರಹಿಬಿಟೆಡ್ ಏರಿಯಾದಲ್ಲಿ ಕೆಲಸ ಮಾಡಿಸಿದ್ದಕ್ಕಾಗಿ ತೊಂದರೆಯಾಗಬಹುದು ಎನ್ನುವ ಎರಡೂ ಕಾರಣಗಳನ್ನು ಇಟ್ಟುಕೊಂಡು ಪೋಲೀಸರು ಮತ್ತು ಗಣಿ ಮಾಲೀಕರು ಒಂದಾಗಿ ಈ ರೀತಿಯ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದ್ದರಿಂದ ಜವಾಬ್ದಾರಿಯುಳ್ಳ ಅಧಿಕಾರಿಯೊಬ್ಬರಿಂದ ತನಿಖೆ ಮಾಡಿಸಿ ವಾಸ್ತವವಾಗಿ ಅಲ್ಲಿ ಏನು ನಡೆಯಿತು ಎಂದು ವಿಚಾರ ಮಾಡಿಸಿ ಸಭೆಗೆ ತಿಳಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.- ಜವಾಬ್ದಾರಿ ಇರುವವರು ಯಾರು, ಜವಾಬ್ದಾರಿ ಇಲ್ಲದವರು ಯಾರು ಎನ್ನುವುದನ್ನು ವಿಚಾರ ಮಾಡತಕ್ಕದ್ದು ಸರಿಯಿಲ್ಲ. ಈಗ ನಮಗೆ ರಿಪೋರ್ಟ್ ಬಂದಿರತಕ್ಕದ್ದು ಜವಾಬ್ದಾರಿ ಜನರಿಂದಲೇ ಎಂದು ಅರಿಕೆ ಮಾಡುತ್ತೇನೆ. ಮಾನ್ಯ ಸದಸ್ಯರಿಗೆ ಕೆಲವರು ಬೇರೆ ರೀತಿಯಾಗಿ ಹೇಳಿರಬಹುದು. ಆದರೆ ಅವರಿಗೆ ಬಂದ ಮಾಹಿತಿಯೇ ಜವಾಬ್ದಾರಿಯುತವಾಗಿ ಬಂದಿರುವುದು, ಬೇರೆಯ ಬೇಜವಾಬ್ದಾರಿ ಜನರಿಂದ ಬಂದಿದೆ ಎಂದು ಹೇಳುವುದು ಅಷ್ಟು ಸಾಧುವಲ್ಲ. ಪೋಸ್ಟ್‌ಮಾರ್ಟಂ ಕೂಡ ಆಗಿ ಡಾಕ್ಟರ್ ಒಪಿನಿಯನ್ ಕೂಡ ಬಂದಿದೆ. ಮತ್ತೆ ಅವರ ಹೆಂಡತಿಯೇ ಅವರನ್ನು ಮನೆಗೆ ಕರೆದು ಕೊಂಡು ಹೋಗಿದ್ದಾರೆ ಹಳ್ಳದಲ್ಲಿ ರಕ್ತದ ಕಲೆಗಳಿವೆ. ಇವೆಲ್ಲವನ್ನೂ ಗಮನಕ್ಕೆ ತಗೆದುಕೊಂಡು ರಿಪೋರ್ಟ್ ಬಂದಿದೆ,

ಶ್ರೀ ಸಿ. ಬೈರೇಗೌಡ.— ಆರು ಅಡಿ ಆಳವಿರುವ ಹಳ್ಳದಲ್ಲಿ ಬಿದ್ದರೆ ಮನುಷ್ಯ ಸಾಯುತ್ತಾನೆಯೇ ? ಈ ಬಗ್ಗೆ ಪುನ: ಪರಿಶೀಲನೆ ಮಾಡಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಪುನ: ಪರಿಶೀಲನೆ ಮಾಡಬೇಕು ಎನ್ನುವುದರಲ್ಲಿ ಅರ್ಥವಿಲ್ಲ.

BUDGET ESTIMATES FOR 1974-75

General Discussion

(Debate Continued)

†ಶ್ರೀ ಸಿ. ಬೈರೇಗೌಡ (ಬೆಮಾಗಳ್) ಅಧ್ಯಕ್ಷರೇ, ನಾನು ನಿನ್ನೆಯ ದಿವಸ ಇದನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಮಾತನಾಡುತ್ತಿದ್ದೆ. ಈ ಹೊತ್ತಿನ ದಿವಸ ವ್ಯವಸಾಯ ಮತ್ತು ಕೈಗಾರಿಕೆ ಈ ಎರಡು ಬಾಬುಗಳಲ್ಲಿಯೂ ಉತ್ಪತ್ತಿ ಸ್ಥಗಿತವಾಗಿದೆ. ಕೈಗಾರಿಕೆಯಲ್ಲಿ ಯಾವ ರೀತಿ ಸ್ಥಗಿತವಾಗಿದೆ ಎನ್ನುವುದಕ್ಕೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಟಾರ್ಗೆಟ್ ಅಚೀವ್ ಮಾಡಬೇಕಾದ್ದು 5.7 ಮತ್ತು 1972-73 ರಲ್ಲಿ ಎಂದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ನಾಲ್ಕನೇ ವರ್ಷದಲ್ಲಿ ಅಚೀವ್ ಆಗಿರುವ ಟಾರ್ಗೆಟ್ I. 6. ಏಕೆ ಹೀಗಾಗುತ್ತಿದೆ ಎಂದರೆ ಅದರ ಮೂಲಭೂತವಾಗಿರತಕ್ಕ ಆರೋಪನೆ ತಪ್ಪಾಗಿದೆ. ಮಿಕ್ಸೆಡ್ ಎಕಾನಮಿ ಎಂದು ಹೇಳುತ್ತಾರೆ. ಒಂದು ಕಡೆ ಪ್ರೈವೇಟ್ ಸೆಕ್ಟಾರಿಗೆ ಉತ್ತೇಜನ ಕೊಡಬೇಕೆಂದು ಎಂದು ಹೇಳುವಾಗ ಇನ್ನೊಂದು ಕಡೆ ಪಬ್ಲಿಕ್ ಸೆಕ್ಟಾರಿಗೆ ಉತ್ತೇಜನ ಕೊಡಬೇಕೆಂದು ಹೇಳುತ್ತಾರೆ. ಈ ಒಂದು ಗೊಂದಲ ಮನಸ್ಥಿತಿಯಲ್ಲಿರತಕ್ಕೆ ವಾತಾವರಣವಿರುವುದರಿಂದ ಕೈಗಾರಿಕೆಯಲ್ಲಿ ಕೂಡ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಅರ್ಥ ಮಂತ್ರಿಗಳು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಸುಮಾರು 18-19 ಕೋಟಿ ರೂಪಾಯಿಗಳ ತೆರಿಗೆಯನ್ನು ಹಾಕಿದ್ದಾರೆ. ಡೆವಲಪಿಂಗ್ ಎಕಾನಮಿ ಇರುವಾಗ ತೆರಿಗೆಗಳನ್ನು ಹಾಕಬಾರದು ಎಂದು ನಾನು ಹೇಳುವವನಲ್ಲ. ಅವರು ಯಾರ ಮೇಲೆ ನುಂಕ ಹಾಕಿದ್ದಾರೆ ಎಂದರೆ ಸಾಮಾನ್ಯ ಜನರು ಯಾರಿದ್ದಾರೆ ಅವರ ಮೇಲೆ ಹೆಚ್ಚು ನುಂಕವನ್ನು ಹಾಕಿದ್ದಾರೆ.

ಇನ್ನು ನಮ್ಮ ರಾಜ್ಯದಲ್ಲಿ ವ್ಯವಸಾಯ ಅತಿ ಮುಖ್ಯವಾದದು ಎಂದು ಅನೇಕ ವರದಿಗಳು ಬಂದಿವೆ. ಇಂತಹ ಒಂದು ವರದಿ ಮುಖ್ಯವಾದುದು ಎಂದರೆ ಒಬ್ಬರು ರೀಸರ್ಚ್ ಸ್ಕಾಲರು ಇಂಗ್ಲೆಂಡಿಗೆ ಹೋಗಿ ಹತ್ತು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಕೂತು ಬಂದು ರೀಸರ್ಚ್ ಕೆಲಸಗಳನ್ನು ಮಾಡಿದ್ದಾರೆ. ಅವರು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರ ಸ್ಥಿತಿಯನ್ನು ಉತ್ತಮಪಡಿಸಲು ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಇಲ್ಲಿ ಹೇಳಿದರೆ ಸೂಕ್ತವಾಗಿರುತ್ತದೆ ಎಂದು ನಾನು